## ಡಾನ್ ರಮೇಶಣ್ಣ!

‘ರಾಮ ಶಾಮ ಭಾಮ’, ‘ಆಕ್ಸಿಡೆಂಟ್’, ‘ವೆಂಕಟ ಇನ್ ಸಂಕಟ’ ಚಿತ್ರಗಳ ನಂತರ ನಿರ್ದೇಶಕನ ಟೊಪ್ಪಿಯನ್ನು ಕಪಾಟಿನಲ್ಲಿಟ್ಟಿದ್ದ ರಮೇಶ್ ಅರವಿಂದ್ ನಟನೆಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದರು. ಇದೀಗ ಟೋಪಿಯ ದೂಳು ಕೊಡವಿರುವ ಅವರು ಆ್ಯಕ್ಷನ್, ಕಟ್ ಎನ್ನುತ್ತಿದ್ದಾರೆ. ಎಲ್ಲವೂ ‘ನಮ್ಮಣ್ಣ ಡಾನ್’ ಮಹಿಮೆ.

‘ನಮ್ಮಣ್ಣ ಡಾನ್’ ರಮೇಶ್ ನಿರ್ದೇಶಿಸುತ್ತಿರುವ ಹೊಸ ಚಿತ್ರದ ಹೆಸರು. ಚಿತ್ರೀಕರಣ ಪ್ರಾರಂಭವಾಗಿರುವ ಈ ಚಿತ್ರದಲ್ಲಿ ಅವರ ಹಿಂದಿನ ಸಿನಿಮಾಗಳಲ್ಲಿ ಇದ್ದಂತೆ ಸ್ಟ್ರಾಂಗ್ ನಗೆಡೋಸ್ ಇರುತ್ತದಂತೆ. ವೈಕುಂಠ ಹೆಸರಿನ ವೈದ್ಯನ ಪಾತ್ರದಲ್ಲಿ ನಟಿಸುತ್ತಿರುವ ರಮೇಶ್‌ರ ಪ್ರಿಸ್ಕ್ರಿಪ್ಷನ್ ತುಂಬಾ ನಗೆಗುಳಿಗೆಗಳು ಇರಲಿವೆಯಂತೆ. ‘ರೋಗ ಎಂಥದಾದರೂ ಸರಿ, ವೈಕುಂಠನ ಕೈಗುಣದಿಂದಾಗಿ ಗುಣಮುಖವಾಗಲೇಬೇಕು’ ಎನ್ನುವುದು ನಿರ್ದೇಶಕರಾಗಿ ಅವರ ನಂಬಿಕೆ.

ಮೋನಾ ಮತ್ತು ಸನಾತನಿ ಎನ್ನುವ ಇಬ್ಬರು ಚೆಲುವೆಯರು ಡಾನಣ್ಣನಿಗೆ ನಾಯಕಿಯರು. ಅಲ್ಲಿಗೆ ನಗೆಯೊಂದಿಗೆ ಗ್ಲಾಮರ್ ಕೆಮಿಸ್ಟ್ರಿಯೂ ಚಿತ್ರದಲ್ಲಿ ಇರಲಿದೆ ಎಂದಾಯಿತು. ಉಳಿದಂತೆ ರಾಜು ತಾಳಿಕೋಟೆ, ಅಚ್ಯುತರಾವ್, ರಾಜೇಂದ್ರ ಕಾರಂತರು ತಾರಾಗಣದಲ್ಲಿದ್ದಾರೆ.





## ಮಂದಾರದಿಂದ ಮಾವಳ್ಳಿಗೆ...

‘ಒಲವೇ ಮಂದಾರ’ದ ನಂತರ ಅವರ್ ಬಿಟ್ ಇವರ್ ಬಿಟ್... ಎನ್ನುವ ಹುಡುಕಾಟದಲ್ಲಿದ್ದ ಯುವ ನಾಯಕನಟ ಶ್ರೀಕಾಂತ್‌ರ ಹೊಸ ಚಿತ್ರ ಕಳೆದ ವಾರ ಸೆಟ್ಟೇರಿದೆ. ಚಿತ್ರದ ಹೆಸರು ‘ಮಾವಳ್ಳಿ ಮಿಲ್ಟ್ರಿ ಹೋಟೆಲ್’. ಫುಲ್ ಮೀಲ್ಸ್, ಹಾಫ್ ಡೋಸ್ ಎನ್ನುವುದು ಶೀರ್ಷಿಕೆಯ ಅಡಿಬರಹ.

ಶಶಾಂಕ್‌ರಾಜ್ ನಿರ್ದೇಶಿಸುತ್ತಿರುವ ‘ಮಾವಳ್ಳಿ...’ಯನ್ನು ಶೋಭಾ ರಾಮಣ್ಣ ನಿರ್ಮಿಸುತ್ತಿದ್ದಾರೆ. ಸಾಹಸಕ್ಕೆ ಒತ್ತು ನೀಡಲಾಗಿರುವ ಕಥೆಯಲ್ಲಿ ಪ್ರೇಮದ ನವಿರುತನಕ್ಕೂ ಅವಕಾಶವಿದೆಯಂತೆ. ಮಂದಾರದ ಪ್ರಭೆಯ ಶ್ರೀಕಾಂತ್‌ಗೆ ಈ ಚಿತ್ರ ಹೊಸ ಇಮೇಜ್ ನೀಡಲಿದೆ ಎನ್ನುವುದು ನಿರ್ದೇಶಕರ ನಂಬಿಕೆ.

ಅದ್ವಿಕ ಎನ್ನುವ ಹೊಸ ಹುಡುಗಿ ಚಿತ್ರದ ನಾಯಕಿ. ರಂಗಾಯಣ ರಘು, ಅವಿನಾಶ್, ರಮೇಶ್ ಭಟ್, ತಿಲಕ್, ತಬಲಾ ನಾಣಿ ಸೇರಿದಂತೆ ಭಾರೀ ತಾರಾಗಣವನ್ನೇ ಶಶಾಂಕ್ ಕಲೆಹಾಕಿದ್ದಾರೆ. ಅಭಿಮನ್ ರೈ ಸಂಗೀತ ಹಾಗೂ ನವೀನ್ ಸುವರ್ಣರ ಛಾಯಾಗ್ರಹಣ ಚಿತ್ರಕ್ಕಿದೆ.

## ದರ್ಶನ್ ಜೈಲು ಪುರಾಣ

‘ಚಾಲೆಂಜಿಂಗ್ ಸ್ಟಾರ್’ ದರ್ಶನ್ ಅರ್ಧಾಂಗಿಯ ಮೇಲೆ ಅಟ್ಟಹಾಸ ಮೆರೆದದ್ದು ಈಗ ಇತಿಹಾಸ. ಪಾಪ, ಪಂಚಾಯತಿದಾರರ ಒತ್ತಾಯದ ಮೇರೆಗೆ ದರ್ಶನ್‌ರ ಪತ್ನಿ ವಿಜಯಲಕ್ಷ್ಮಿ ಮಾತು ಬದಲಿಸಿದರು. ಇನ್ನು ಮುಂದೆ, ‘ಗಂಡ ಹೆಂಡಿರ ಜಗಳ ಪೊಲೀಸ್ ಠಾಣೆ ಮೆಟ್ಟಿಲು ಹತ್ತುವ ತನಕ’ ಎಂದು ಹೇಳಬಹುದು.

ಅಂದ ಹಾಗೆ, ದರ್ಶನ್‌ರ ಈ ಅಟ್ಟಹಾಸ ಹೊಸತೇನೂ ಅಲ್ಲ. ಕನ್ನಡ ಚಿತ್ರರಂಗದ ಅಮೃತ ಮಹೋತ್ಸವ ಸಮಾರಂಭದಲ್ಲಿ ಅವರು ಸಿಟ್ಟು ಪ್ರದರ್ಶಿಸಿದ್ದು ಸುದ್ದಿಯಾಗಿತ್ತು. ತಮ್ಮ ತಂದೆಯ ಸಾಧನೆಯ ಬಗ್ಗೆ ಪುಸ್ತಕ ಪ್ರಕಟಿಸದ ವಾಣಿಜ್ಯ ಮಂಡಳಿಯ ಅಂದಿನ ಅಧ್ಯಕ್ಷೆ ಜಯಮಾಲಾ ಅವರನ್ನು ಹೀನಾಮಾನ ನಿಂದಿಸಿ ಮಹಿಳೆಯರ ಬಗೆಗಿನ ತಮ್ಮ ಗೌರವ ಎಂತಹದ್ದು ಎನ್ನುವುದನ್ನು ಆಗಲೇ ಬಹಿರಂಗಪಡಿಸಿದ್ದರು. ಇದೇ ದರ್ಶನ್, ತಮ್ಮ ಸಿನಿಮಾಗಳಿಗೆ ಪೂರಕವಾಗಿ ಬರೆಯದ ಪತ್ರಕರ್ತರ ಮೇಲೆ ಸಮಾರಂಭವೊಂದರಲ್ಲಿ ಸಿಟ್ಟು ಕಾರಿಕೊಂಡಿದ್ದರು. ಈಗ ಪತ್ನಿಯ ಸರದಿ.

‘ದರ್ಶನ್ ಜೈಲು ಪ್ರಕರಣ’ದಲ್ಲಿ ಕನ್ನಡ ಚಿತ್ರೋದ್ಯಮದ ಬಹುತೇಕ ಗಣ್ಯರು ನಾಯಕ ನಟನ ಬೆನ್ನಿಗೆ ನಿಂತಿದ್ದಾರೆ. ವಿಪರ್ಯಾಸವೆಂದರೆ, ಉದ್ಯಮದ ಬಿಕ್ಕಟ್ಟಿನ ಸಂದರ್ಭದಲ್ಲಿ ಇಂಥ ಒಗ್ಗಟ್ಟು ಕಾಣಿಸುವುದೇ ಇಲ್ಲ! ಹೀಗೆ ದರ್ಶನ್ ಬೆಂಬಲಕ್ಕೆ ನಿಂತ ಹೀರೋಗಳು ‘ಎಲ್ಲರ ಮನೆಯಲ್ಲೂ ಇದು ನಡೆಯೋದೇ’ ಎಂದು ತಿಪ್ಪೆ ಸಾರಿಸಿದ್ದಾರೆ. ಅಂದರೆ, ಈ ‘ಹೀರೋ’ಗಳೆಲ್ಲ ಮನೆಯಲ್ಲಿ ಹೆಂಡತಿಗೆ ಚಪ್ಪಲಿಯಲ್ಲಿ ಬಾರಿಸಿದವರೇ ಇರಬಹುದೆ?



■ ರಘು